ಇಷ್ಟೊಂದು ದುಡ್ಡನ್ನು ಏಕೆ ಕೊಡಬೇಕೆಂದು ವಿಚಾರ ಮಾಡಿ ಅದನ್ನು ವಜಾ ಮಾಡಿ ಎಂದು ಕೇಳುತ್ತಾರೆ. ಮಂಡಲಿಯ ನಿಯಮಾನುಸಾರ ೭ ವರ್ಷದ ಮೇಲೆ ಆಗಿದ್ದರೆ ವಜಾ ಮಾಡುವುದಕ್ಕೆ ಬರುತ್ತದೆ ಆ ರೀತಿ ಏನಾದರೂ ನಿಯಮಾನುಸಾರ ವಜಾ ಮಾಡುವುದಕ್ಕೆ ಪ್ರಾವಿಷನ್ ಇದ್ದರೆ ಮಾನ್ಯ ಸದಸ್ಯರು ಹೇಳಿದ್ದನ್ನು ವಜಾ ಮಾಡಿಸಬಹುದು. ಅಂದರೆ ಹಳ್ಳಿ ಎಲೆಕ್ಟ್ರಿಫೈ ಆಗಿದ್ದರೆ ಅಂಥ ಸಂದರ್ಭದಲ್ಲಿ ವಜಾ ಮಾಡಬಹುದು ಅನಧಿಕೃತವಾಗಿ ಕಟ್ಟಿದ ೧೬೫ ಮನೆಗಳಿಗೆ ಈಗಾಗಲೇ ಸ್ಪೆಷಲ್ ಪ್ರಾವಿಷನ್ ಮಾಡಿ ಸರ್ವೀಸ್ ಕೊಡಲಾಗಿದೆ. ಅದೇ ರೀತಿ ಅಗ್ರಿಮೆಂಟ್ ಮಾಡಿಕೊಂಡು ಉಳಿದ ಮನೆಗಳಿಗೆ ವಿದ್ಯುತ್ ಸರಬರಾಜು ಮಾಡುವುದಕ್ಕೆ ವ್ಯವಸ್ಥೆ ಮಾಡಲಾಗುವುದು.

ಶ್ರೀ ಬಿ. ಧರ್ಮಪ್ಪ.— ಈ ವಿಚಾರವನ್ನು ನಾನು ನೂರು ಸಾರಿ ಮೌಲಿನರ ಗಮನಕ್ಕೆ ತಂದಿದ್ದೇನೆ. ಆದರೂ ಆಗಿಲ್ಲ. ಆದಷ್ಟು ಶೀಘ್ರವಾಗಿ ಸಂಬಂಧಪಟ್ಟವರಿಗೆ ಹೇಳಿ ಮಾಡಿಸಿ ಕೊಡುತ್ತೇನೆಂದು ಸ್ಪಷ್ಟಪಡಿಸಿದರೆ ಸಾಕು.

ಶ್ರೀ ಲಕ್ಷ್ಮೀನರಸಿಂಹಯ್ಯ.— ೧೬೫ ಮನೆಗಳಿಗೆ ಯಾವ ಆಧಾರದ ಮೇಲೆ ಕೊಡಲಾಗಿದೆಯೋ ಅದೇ ಆಧಾರದ ಮೇಲೆ ಮಿಕ್ಕ ಮನೆಗಳಿಗೂ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಗುಲ್ಬರ್ಗಾ ಜಿಲ್ಲೆಯಲ್ಲಿನ ಖಾಸಗೀ ಸಿಮೆಂಟ್ ಕಾರ್ಖಾನೆಗಳು

೧೦೮೯. ಶ್ರೀ ಡಿ. ಬಸವನಗೌಡ (ಹೊನ್ನಾಳಿ).—ಮಾನ್ಯ ಗಣಿ ಹಾಗೂ ಭೂ ವಿಜ್ಞಾನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಗುಲ್ಬರ್ಗಾ ಜಿಲ್ಲೆಯಲ್ಲಿರುವ ಖಾಸಗಿ ಸಿಮೆಂಟ್ ತಯಾರಿಸುವ ಕಾರ್ಖಾನೆಗಳ ಸಂಖ್ಯೆ ಎಷ್ಟು ?

(ಆ) ಅವುಗಳಿಗೆ ಯಾವ ಮೂಲದಿಂದ ಕಚ್ಚಾ ವಸ್ತು ಸರಬರಾಜು ಆಗುತ್ತಿದೆ ಹಾಗೂ ಅವುಗಳ ದಿನನಿತ್ಯದ ಪ್ರಮಾಣವೆಷ್ಟು ?

(ಇ) ಸರಬರಾಜು ಮಾಡುವ ವ್ಯಕ್ತಿ ಹಾಗೂ ಸಂಸ್ಥೆಗಳ ಹೆಸರುಗಳ ವಿವರಗಳನ್ನು ಒದಗಿಸುವುದು.

(ಈ) ಈ ಮೂಲಗಳಿಂದ ಸರ್ಕಾರಕ್ಕೆ ಪ್ರತಿವರ್ಷ ಬರುವ ರಾಜಧನವೆಷ್ಟು ?

(೧೯೮೭ರಿಂದ ೧೯೮೮ರ ವರೆವಿಗೆ ವಿವರ ಒದಗಿಸುವುದು)

ಶ್ರೀ ರಮೇಶ್ ಸಿ. ಜಿಗಜಿಣಗಿ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು).—

(ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಒಟ್ಟು ೧೮ ಖಾಸಗಿ ಸಿಮೆಂಟ್ ಕಾರ್ಖಾನೆಗಳಿವೆ. ಅದರಲ್ಲಿ ೪ ಮುಖ್ಯ ಸಿಮೆಂಟ್ ತಯಾರಿಕಾ ಘಟಕವಾಗಿದ್ದು ಇವುಗಳ ಉತ್ಪಾದನಾ ಸಾಮರ್ಥ್ಯ ಪ್ರತಿದಿನ ೧೫೦೦ ರಿಂದ ೫೮೦೦ ಟನ್‌ಗಳಷ್ಟಿರುತ್ತದೆ. ಉಳಿದವು ಸಣ್ಣ ಪ್ರಮಾಣದ ಘಟಕವಾಗಿದ್ದು ಇವುಗಳ ಉತ್ಪಾದನಾ ಸಾಮರ್ಥ್ಯ ಪ್ರತಿದಿನ ೨೦–೫೦೦ ಟನ್‌ಗಳಷ್ಟಾಗಿರುತ್ತದೆ.

(ಆ) ಮುಖ್ಯ ಮೂಲ ವಸ್ತುವಾದ ಸುಣ್ಣದ ಕಲ್ಲು ಕಾರ್ಖಾನೆಗಳ ಸಮೀಪದಲ್ಲಿಯೇ ಇರುವ ಸ್ವಂತ ಗಣಿಗಳಿಂದ ಸರಬರಾಜು ಆಗುತ್ತದೆ. ಹಾಗೇ ಸ್ವಂತ ಗಣಿಗಳು ಇಲ್ಲದಿರುವ ಘಟಕಗಳು ಬೇರೆ ಗುತ್ತಿಗೆ ಹೊಂದಿರುವ ಗಣಿಗಳಿಂದ ಪಡೆಯುತ್ತಾರೆ. ಪ್ರತಿ ದಿನ ಬೇಕಾಗುವ ಸುಣ್ಣಕಲ್ಲಿನ ಪ್ರಮಾಣ ಸುಮಾರು ೧೫,೦೦೦ ಟನ್.

(ಇ)

೧ ಮೆ॥ ವಾಡಿ ಸ್ಟೋನ್ ಮಾರ್ಕೆಟಿಂಗ್ ಕಂ, ವಾಡಿ
೨ ಮೆ॥ ಬಂದೇಕಾರ್ ಮೈನ್ಸ್, ಚಿತ್ತಾಪುರ
೩ ಶಿವಪ್ಪಾ ಸೋಮನಾಥನಹಳ್ಳಿ
೪ ಮೆ॥ ಚಿತ್ತಾಪುರ ಸ್ಟೋನ್ ಚಿತ್ತಾಪುರ ಮತ್ತು
೫ ಶಕುಂತಲಾ ಸಿಮೆಂಟ್ ಕಂ. ಚಿತ್ತಾಪುರ

(ಬಿ) ಎ. ಪಿ. ಸಿ. ವಾಡಿ
(ಬಿ) ಮೆ॥ ವಾಸವದತ್ತಾ ಸಿಮೆಂಟ್ಸ್ ಸೇಡಂ
(ಸಿ) ರಾಜಶ್ರೀ ಸಿಮೆಂಟ್ಸ್ ಪುಳಖೇಡ
(ಡಿ) ಎ ಸಿ. ಸಿ. ಶಹಾಬಾದ್ ಮತ್ತು
(ಇ) ಕರ್ನಾಟಕ ಸಿಮೆಂಟ್ಸ್ ಚಿತ್ತಾಪುರ

ಈ ಘಟಕಗಳು ತಮ್ಮದೇ ಆದ ಗಣಿ ಗುತ್ತಿಗೆ ಪಡೆದಿವೆ.

ಈ ಮೂಲಗಳಿಂದ ಬರುವ ರಾಜಧನ ಈ ಕೆಳಕಂಡಂತಿದೆ.

೧೯೮೫ — ೧೦೧.೩೫ ಲಕ್ಷಗಳು
೧೯೮೬ — ೧೩೮.೩೩ ,,
೧೯೮೭ — ೩೦೦.೦೦ ,,
೧೯೮೮ — ೪೦೦.೦೦ ,,

ಈ ಹೆಚ್ಚುವರಿ ರಾಜಧನವು ಸುಣ್ಣದ ಕಲ್ಲಿನಮೇಲೆ ವಿಧಿಸಲಾಗಿದ್ದು ರಾಜಧನವನ್ನು ದಿನಾಂಕ ೫-೫-೧೯೮೭ ರಿಂದ ಮೆ. ಟನ್‌ಗೆ ರೂ. ೪-೫೦ ಪೈಸೆಯಿಂದ ೧೦-೦೦ ರೂ.ಗೆ ಹೆಚ್ಚಿಸಿರುವುದರಿಂದ ಬರುತ್ತದೆ.

ಶ್ರೀ ಡಿ ಬಿ. ಬಸವನಗೌಡ.—ಮಾನ್ಯ ಸಚಿವರು ಕೊಟ್ಟ ಉತ್ತರದಲ್ಲಿ ೧೦ ಸಿಮೆಂಟ್ ಕಾರ್ಖಾನೆಗಳ ಹೆಸರನ್ನು ಹೇಳಿದರು. ಇದರಿಂದ ಸರ್ಕಾರಕ್ಕೆ ಬರತಕ್ಕ ರಾಜಧನ ಕೇವಲ ೪ ಕೋಟಿ ರೂಪಾಯಿಗಳು. ನನಗೆ ಬಂದಿರತಕ್ಕ ವರದಿ ಪ್ರಕಾರ ಈಗ ನಮ್ಮ ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿರತಕ್ಕ ಗಣಿ ಏನಿದೆ ಇದರಿಂದ ಖಾಸಗೀಯವರು ಸರ್ಕಾರದ ಪರವಾನಗಿ ಇಲ್ಲದೆ, ಯಾವ ಒಂದು ನಿಬಂಧನೆಯೂ ಇಲ್ಲದೆ ಹಗಲು ರಾತ್ರಿ ಲೂಟಿ ಮಾಡಿ ಖಾಸಗೀ ಕಾರ್ಖಾನೆಗಳಿಗೆ ಕಡಿಮೆ ದರದಲ್ಲಿ ಕಲ್ಲನ್ನು ಕೊಟ್ಟು ಸರ್ಕಾರಕ್ಕೆ ಬರತಕ್ಕ ರಾಜಧನವನ್ನು ಲೂಟಿ ಮಾಡುತ್ತಾರೆಂದು ತಿಳಿದಬಂದಿದೆ. ಇದರ ಬಗ್ಗೆ ಮಾನ್ಯ ಸಚಿವರು ಉತ್ತರಿಸುತ್ತಾರೆಯೇ ?

ಶ್ರೀ ರಮೇಶ್ ಸಿ. ಜಿಗಜಿಣಗಿ.—ಖಾಸಗೀ ವ್ಯಕ್ತಿಗಳು ಸರ್ಕಾರಿ ಜಮೀನಿನಲ್ಲಿ ಕ್ವಾರಿ ಮಾಡಿ ಬೇರೆ ಸಿಮೆಂಟ್ ಕಾರ್ಖಾನೆಗಳಿಗೆ ರಾ-ಮೆಟೀರಿಯಲ್ ಅನ್ನು ಕೊಡುತ್ತಿದ್ದಾರೆಂದು ಮಾನ್ಯ ಸದಸ್ಯರು ಹೇಳುತ್ತಾರೆ, ಇದು ಸರ್ಕಾರದ ಗಮನಕ್ಕೆ ಬಂದಿಲ್ಲ. ಅಂಥವರ ಪಟ್ಟಿಯನ್ನು ಕೊಟ್ಟರೆ ಸದನ ಮುಂಗಿದಮೇಲೆ ಹಿರಿಯ ಅಧಿಕಾರಿಗಳನ್ನು ಕಳುಹಿಸಿ ಸೂಕ್ತ ಕ್ರಮ ಕೈಗೊಳ್ಳುತ್ತೇನೆ.

(ಪ್ರೇಕ್ಷಕರ ಗ್ಯಾಲರಿಯಿಂದ ಸುಮಾರು ೮-೧೦ ಜನ ಪ್ರೇಕ್ಷಕರು ಸಿದ್ಧಗಂಗಾ ಮಾತದ ಗೌರಿಶಂಕರ ಸ್ವಾಮಿಗಳಿಗೆ ಧಿಕ್ಕಾರ ಎಂದು ಘೋಷಣೆ ಕೂಗಿ ಕರಪತ್ರಗಳನ್ನು ಸಭೆಯೊಳಕ್ಕೆ ಎಸೆದರು.)

ಕೈಗಾ ಅಣು ಸ್ಥಾವರ ಕುರಿತು

೩೯೧. ಶ್ರೀ ಅಜ್ಜಿಬಾಳ ಜಿ. ಎಸ್. ಹೆಗಡೆ (ಅಂಕೋಲ).—ಮಾನ್ಯ ಭಾರಿ ಸಾಗೂ ಮಧ್ಯಮ ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಎ) ಕೈಗಾ ಅಣು ಸ್ಥಾವರ ಕಾರ್ಯ ಆರಂಭವಾಗಿದೆಯೇ ?

(ಬ) ಹಾಗಿದ್ದಲ್ಲಿ ಎಷ್ಟು ಕೆಲಸ ಆಗಿದೆ ಹಾಗೂ ಈ ಬಗ್ಗೆ ಎಷ್ಟು ಖರ್ಚು ಮಾಡಲಾಗಿದೆ ?

(ಇ) ಕೈಗಾ ಅಣು ಸ್ಥಾವರದಿಂದ ಆಗುವ ವಿಕಿರಣದ ಸುರಕ್ಷತೆಗೆ ಯಾವ ರೀತಿ ಅಣು ಕ್ರಮ ತೆಗೆದುಕೊಳ್ಳಲಾಗಿದೆ ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

(ಎ, ಬಿ ಮತ್ತು ಇ).—

ಕೈಗಾ ಅಣು ಸ್ಥಾವರ ಯೋಜನೆಯು ಕೇಂದ್ರ ಸರ್ಕಾರದ್ದಾದುರಿಂದ ವಿವರಗಳು ದೊರೆಯುವುದಿಲ್ಲ. ಕೇಂದ್ರ ಸರ್ಕಾರವು ಪರಿಸರ ಸುರಕ್ಷತೆಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತಾರೆ.